ದೂರವಾಣಿ ಸಂ: 080–22243926
ಫ್ಯಾಕ್ಸ್ ಸಂ: 080–22110134

ವೆಬ್‌ಸೈಟ್: https://kptcl.karnataka.gov.in/
ಇ–ಅಂಚೆ: gmtkptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

---

**ವಿಷಯ:** ಕ.ವಿ.ಪ್ರ.ನಿ.ನಿ ಯ ವಿದ್ಯುತ್ ಉಪಕೇಂದ್ರಗಳಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಮೀಸಲಾದ ಟರ್ಮಿನಲ್ ಬೇಗಳ ನಿರ್ಮಾಣಕ್ಕಾಗಿ ಕ.ವಿ.ಪ್ರ.ನಿ.ನಿ ಯ ಮೂಲಭೂತ ಸೌಕರ್ಯಗಳನ್ನು ಬಳಸಲು ಸಾಮಾನ್ಯ ಮೂಲ ಸೌಕರ್ಯ ಶುಲ್ಕಗಳನ್ನು ಸಂಗ್ರಹಿಸುವ ಕುರಿತು.

**ಉಲ್ಲೇಖ:**
1) ನಿಗಮದ ಸಮ ಸಂಖ್ಯೆ ಆದೇಶ ದಿನಾಂಕ: 17.08.2012.
2) ನಿಗಮದ ಸಮ ಸಂಖ್ಯೆ ಆದೇಶ ದಿನಾಂಕ: 03.09.2020.
3) ನಿಗಮದ ಸಮ ಸಂಖ್ಯೆ ಆದೇಶ ದಿನಾಂಕ: 11.12.2020.
4) ಒ.ಪಿ. ಸಂಖ್ಯೆ 07/2022 ರ ಕುರಿತಂತೆ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ: 23.05.2023.
5) ಆರ್ಥಿಕ ಸಲಹೆಗಾರರು (ನಿ.ವ್ಯ) ರವರ ಆಂತರಿಕ ಟಿಪ್ಪಣಿ ಸಂಖ್ಯೆ: ಕೆಪಿಟಿಸಿಎಲ್/ಬಿ117/25719/2021- 22/ 577-579 ದಿನಾಂಕ: 04.07.2023.
6) ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ ರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 01.08.2023.

*****

**<u>ಪೀಠಿಕೆ:</u>**

ಉಲ್ಲೇಖ (1) ರ ನಿಗಮದ ಆದೇಶ ದಿನಾಂಕ 17.08.2012 ರಲ್ಲಿ ಸೂಚಿಸಲಾಗಿರುವಂತೆ ಕ.ವಿ.ಪ್ರ.ನಿ.ನಿ. ಯ ವಿದ್ಯುತ್ ಉಪಕೇಂದ್ರಗಳಲ್ಲಿನ ಭೂಮಿಯನ್ನು ಬಳಸಲು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಒಂದು ಬಾರಿ ಮರುಪಾವತಿಸಲಾಗದ ಶುಲ್ಕಗಳನ್ನು ಸಂಗ್ರಹಿಸುವುದರ ಜೊತೆಗೆ ಹೆಚ್ಚುವರಿಯಾಗಿ ಕ.ವಿ.ಪ್ರ.ನಿ.ನಿ ಯ ವಿದ್ಯುತ್ ಉಪಕೇಂದ್ರಗಳಲ್ಲಿನ ಸಾಮಾನ್ಯ ಮೂಲಸೌರ್ಕಯಗಳನ್ನು ಬಳಸುವ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಒಂದು ಬಾರಿ ಮರುಪಾವತಿಸಲಾಗದ ಸಾಮಾನ್ಯ ಮೂಲ ಸೌಕರ್ಯ ಶುಲ್ಕಗಳನ್ನು ಸಂಗ್ರಹಿಸಲು ಉಲ್ಲೇಖ (2) ರ ಆದೇಶ ದಿನಾಂಕ 03.09.2020 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (3) ರಲ್ಲಿನ ನಿಗಮದ ಆದೇಶ ದಿನಾಂಕ 11.12.2020 ರ ಅನ್ವಯ ಕ.ವಿ.ಪ್ರ.ನಿ.ನಿ ಯ ವಿದ್ಯುತ್ ಜಾಲದೊಂದಿಗೆ ಸಂಪರ್ಕಗೊಂಡಿರುವ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸಾಮಾನ್ಯ ಮೂಲಸೌಕರ್ಯ ಶುಲ್ಕಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಸಂಗ್ರಹಿಸಲು ಹಾಗೂ ವಿಳಂಬ ಪಾವತಿಗೆ ಬಡ್ಡಿಯನ್ನು ವಿಧಿಸಲು ನಿಗಮದ ಅನುಮೋದನೆ ನೀಡಲಾಗಿರುತ್ತದೆ.

ಈ ನಿಟ್ಟಿನಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರು ದಿನಾಂಕ: 03.09.2020 & 11.12.2020 ರ ನಿಗಮದ ಆದೇಶಗಳನ್ನು ರದ್ದುಗೊಳಿಸುವಂತೆ ಕೋರಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

EE - IT
23/8/23

ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ 25.06.2021 ರ ಆದೇಶದಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು "Not Maintainable" ಎಂದು ವಜಾಗೊಳಿಸಿ ಆದೇಶಿಸಿರುತ್ತದೆ. ಸದರಿ ಆದೇಶದ ವಿರುದ್ಧ ಸ್ವತಂತ್ರ ವಿದ್ಯುತ್ ಉತ್ಪಾದಕರು ಗೌರವಾನ್ವಿತ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಮೇಲ್ಮನವಿಗಳನ್ನು ಸಲ್ಲಿಸಿರುತ್ತಾರೆ. ತತ್ಸಂಬಂಧ ಗೌರವಾನ್ವಿತ ನ್ಯಾಯಾಲಯವು ದಿನಾಂಕ 21.09.2021 ರ ತನ್ನ ತೀರ್ಪಿನಲ್ಲಿ ದಿನಾಂಕ 03.09.2020 ಮತ್ತು 11.12.2020 ರ ನಿಗಮದ ಆದೇಶಗಳನ್ನು ರದ್ದು ಪಡಿಸುತ್ತಾ ಸಾಮಾನ್ಯ ಮೂಲಭೂತ ಸೌಕರ್ಯ ಬಳಸಲು ಒಂದು ಬಾರಿ ಮರುಪಾವತಿಸಲಾಗದ ಶುಲ್ಕಗಳನ್ನು ವಿಧಿಸಲು ಕ್ರಮ ಕೈಗೊಳ್ಳಲು ಕಾನೂನು ರೀತ್ಯ ನಿಗಮವು ಮುಕ್ತವಾಗಿರುವುದಾಗಿ ಆದೇಶಿಸಿರುತ್ತದೆ. ಈ ಕಾರಣದಿಂದಾಗಿ, ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಒಂದು ಬಾರಿ ಮರುಪಾವತಿಸಲಾಗದ ಸಾಮಾನ್ಯ ಮೂಲಭೂತ ಸೌಕರ್ಯ ಶುಲ್ಕಗಳನ್ನು ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿರುವುದಿಲ್ಲ.

ಅದರಂತೆ, ಕ.ವಿ.ಪ್ರ.ನಿ.ನಿ ಯು ಈ ಕೆಳಗಿನ ಪರಿಹಾರವನ್ನು ಕೋರಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಒ.ಪಿ. ಸಂಖ್ಯೆ: 07/2022 ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತದೆ.

ಅ) ಕ.ವಿ.ಪ್ರ.ನಿ.ನಿ ಯ ಉಪಕೇಂದ್ರಗಳಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಮೀಸಲಾದ ಟರ್ಮಿನಲ್ ಬೇಗಳ ನಿರ್ಮಾಣಕ್ಕಾಗಿ ಕ.ವಿ.ಪ್ರ.ನಿ.ನಿ.ಯ ಮೂಲಸೌಕರ್ಯಗಳನ್ನು ಬಳಸುವುದಕ್ಕಾಗಿ ಹಾಗೂ ಟರ್ಮಿನಲ್ ಬೇಗಳಿಂದ ಕ.ವಿ.ಪ್ರ.ನಿ.ನಿ ಯ ವಿದ್ಯುತ್ ಜಾಲಕ್ಕೆ ಸಂಪರ್ಕ ಕಲ್ಪಿಸಲು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಶುಲ್ಕವನ್ನು ಮರುಪಾವತಿ ಪಡೆಯಲು ಕ.ವಿ.ಪ್ರ.ನಿ.ನಿ ಗೆ ಅವಕಾಶ ನೀಡಲು,

ಆ) ದಿನಾಂಕ: 03.09.2020 & 11.12.2020 ರ ನಿಗಮದ ಆದೇಶದಂತೆ ಸಾಮಾನ್ಯ ಮೂಲಸೌಕರ್ಯ ಬಳಸುವ ಶುಲ್ಕವನ್ನು ಮರುಪಾವತಿಸಿಕೊಳ್ಳಲು ಅನುಮತಿ ನೀಡಲು,

ಇ) ನ್ಯಾಯ ಮತ್ತು ಸಮಾನತೆಯ ಹಿತಾಸಕ್ತಿಯಲ್ಲಿ ಸೂಕ್ತವೆಂದು ಪರಿಗಣಿಸಲಾದ ಇತರೆ ಆದೇಶಗಳನ್ನು ಹೊರಡಿಸಲು,

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಕ.ವಿ.ಪ್ರ.ನಿ.ನಿ ಯ ಅರ್ಜಿಯಲ್ಲಿನ ಮನವಿಗಳನ್ನು ಹಾಗೂ ದಿನಾಂಕ: 26.08.2022 ರಂದು ನಡೆದ ಸಾರ್ವಜನಿಕ ವಿಚಾರಣೆಯಲ್ಲಿ ಪಾಲುದಾರರುಗಳಿಂದ ಸ್ವೀಕೃತವಾದ ಮನವಿಗಳನ್ನು ಪರಿಗಣಿಸಿ, ವಿದ್ಯುತ್ ಕಾಯಿದೆಯ ಸೆಕ್ಷನ್-10 ರ ಅಡಿಯಲ್ಲಿ ಉಲ್ಲೇಖಿಸಲಾದಂತೆ ಸ್ವತಂತ್ರ ವಿದ್ಯುತ್ ಉತ್ಪಾದಕರು ಕ.ವಿ.ಪ್ರ.ನಿ.ನಿ ಯ ವಿದ್ಯುತ್ ಜಾಲದೊಂದಿಗೆ ಸಂಪರ್ಕಗೊಳಿಸುವ ಹಂತದವರೆಗೆ ಕ.ವಿ.ಪ್ರ.ನಿ.ನಿ.ಯ ಮೂಲ ಸೌಕರ್ಯಗಳನ್ನು ಬಳಸಲು ಮೂಲಸೌಕರ್ಯ ವೆಚ್ಚವನ್ನು ಭರಿಸಬೇಕಾಗಿರುತ್ತದೆಂದು ಗಮನಿಸಿದೆ. ಹೀಗಾಗಿ ಟರ್ಮಿನಲ್ ಬೇ ನಿರ್ಮಾಣಕ್ಕಾಗಿ ಕ.ವಿ.ಪ್ರ.ನಿ.ನಿ ಉಪಕೇಂದ್ರಗಳಲ್ಲಿ ಬಳಸಲಾದ ಭೂಮಿಯ ವೆಚ್ಚವನ್ನು ಹೊರತುಪಡಿಸಿ, ಕ.ವಿ.ಪ್ರ.ನಿ.ನಿ. ಯ ಉಪಕೇಂದ್ರದಲ್ಲಿನ ಸಾಮಾನ್ಯ ಮೂಲಸೌಕರ್ಯ (ಉದಾ: ಭೂಚಾಪೆ, ಕೇಬಲ್ ಡಕ್ಟ್, ಕಂಟ್ರೋಲ್ ರೂಂ, ಆವರಣದ ದೀಪ, ಉಪ ಕೇಂದ್ರದ ಸ್ಟ್ರಕ್ಚರ್ ಇತ್ಯಾದಿ) ಗಳ ವೆಚ್ಚವನ್ನು ಸ್ವತಂತ್ರ ವಿದ್ಯುತ್ ಉತ್ಪಾದಕರು ಭರಿಸಬೇಕಾಗಿರುವುದನ್ನು ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗಮನಿಸಿರುತ್ತದೆ.

ಅರ್ಜಿಯಲ್ಲಿನ ಮೇಲಿನ ಅಂಶಗಳ ಆಧಾರದ ಮೇಲೆ ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 23.05.2023 ರಂದು ಈ ಕೆಳಗಿನಂತೆ ಅಂತಿಮ ಆದೇಶವನ್ನು ಹೊರಡಿಸಿರುತ್ತದೆ.

*a) "It is the duty of a generators to pay the one time non-refundable common infrastructure charges towards the facilities extended by KPTCL to ease the process of getting interconnection apart from O&M charges and network augmentation charges collected towards O&M of line terminal bays and strengthening activities of existing network beyond the interconnection point, respectively.*

b) *It is outside the purview of the Commission to determine the price of renting out the space owned by KPTCL.*

c) *The Commission is of the view that so far as prospective generators are concerned, the Commissioned need not to determine the charges of the parcel of land along with common infrastructure owned by KPTCL, within its sub-station.*

d) *The Order cannot be retrospective in nature and such claims cannot be allowed with retrospective effect.*

*......"*

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ದಿನಾಂಕ 23/05/2023 ರ ಆದೇಶದಲ್ಲಿ *"....In future for the prospective generators seeking space in the substation for construction of bay, the KPTCL may include all its charges for parting with the space and associated facilities"* ಎಂಬುದಾಗಿ ಉಲ್ಲೇಖವಿರುತ್ತದೆ.

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಈ ನಿರ್ದೇಶನಗಳಿಗೆ ಅನುಸಾರವಾಗಿ ಮಾನ್ಯ ಆಯೋಗವು ಹೊರಡಿಸಿದ ಆದೇಶದ ದಿನಾಂಕ 23/05/2023 ರಿಂದ ಜಾರಿಗೆ ಬರುವಂತೆ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಒಂದು ಬಾರಿ ಮರುಪಾವತಿಸಲಾಗದ ಸಾಮಾನ್ಯ ಮೂಲ ಸೌಕರ್ಯ ಶುಲ್ಕಗಳನ್ನು ಸಂಗ್ರಹಿಸಲು ಈ ಆದೇಶ

**ಆದೇಶ ಸಂಖೆ: KPTCL/B28(a)/32543/2012-13** **ದಿನಾಂಕ: 01/08/2023**

ಉಲ್ಲೇಖ (2) ಮತ್ತು (3) ರ ಅಡಿಯಲ್ಲಿ ಉಲ್ಲೇಖಿಸಲಾದ ದಿನಾಂಕ 03/09/2020 ಮತ್ತು ದಿನಾಂಕ 11/12/2020 ರ ಈ ಹಿಂದಿನ ನಿಗಮದ ಆದೇಶಗಳನ್ನು ರದ್ದುಪಡಿಸಿ, ದಿನಾಂಕ 23/05/2023 ರ ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದ ಆಧಾರದ ಮೇಲೆ ಕ.ವಿ.ಪ್ರ.ನಿ.ನಿ ಯ ಉಪಕೇಂದ್ರಗಳಲ್ಲಿ ತಮಗೆ ಮೀಸಲಾದ ಟರ್ಮಿನಲ್ ಬೇಗಳ ನಿರ್ಮಾಣಕ್ಕಾಗಿ ಕ.ವಿ.ಪ್ರ.ನಿ.ನಿ ಯ ಸಾಮಾನ್ಯ ಮೂಲ ಸೌಕರ್ಯಗಳನ್ನು ಬಳಸುವ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾದ ಒಂದು ಬಾರಿ ಮರುಪಾವತಿಸಲಾಗದ ಸಾಮಾನ್ಯ ಮೂಲ ಸೌಕರ್ಯ ಶುಲ್ಕಗಳನ್ನು ಸಂಗ್ರಹಿಸಲು ಈ ಮೂಲಕ ಅನುಮೋದನೆಯನ್ನು ನೀಡಲಾಗಿದೆ.

| **ಸ್ವತಂತ್ರ ವಿದ್ಯುತ್ ಉತ್ಪಾದಕರ ಟರ್ಮಿನಲ್ ಬೇಗಳ ವಿವರ** | **ಶುಲ್ಕ(ಚಾಲ್ತಿಯಲ್ಲಿರುವ ಎಸ್. ಆರ್ ದರ ಪಟ್ಟಿಯನ್ವಯ) ರೂ ಲಕ್ಷ ಗಳಲ್ಲಿ** |
|---|---|
| ಕ.ವಿ.ಪ್ರ.ನಿ.ನಿ ಯ 220/110/11 ಕೆ.ವಿ ಅಥವಾ 220/66/11 ಕೆ.ವಿ ಅಥವಾ 110/33/11 ಕೆ.ವಿ ಅಥವಾ 66/11 ಕೆ.ವಿ. ಉಪಕೇಂದ್ರದಲ್ಲಿ 11 ಕೆ.ವಿ. ಟರ್ಮಿನಲ್ ಬೇ | 4.00 |
| ಕ.ವಿ.ಪ್ರ.ನಿ.ನಿ ಯ 110/33 ಕೆ.ವಿ ಅಥವಾ 66/33 ಕೆ.ವಿ. ಉಪಕೇಂದ್ರದಲ್ಲಿ 33 ಕೆ.ವಿ. ಟರ್ಮಿನಲ್ ಬೇ | 10.00 |
| ಕ.ವಿ.ಪ್ರ.ನಿ.ನಿ ಯ 66/11 ಕೆ.ವಿ ಅಥವಾ 66/33 ಕೆ.ವಿ. ಉಪಕೇಂದ್ರದಲ್ಲಿ 66 ಕೆ.ವಿ. ಟರ್ಮಿನಲ್ ಬೇ | 14.50 |

| ಸ್ವತಂತ್ರ ವಿದ್ಯುತ್ ಉತ್ಪಾದಕರ ಟರ್ಮಿನಲ್ ಬೇಗಳ ವಿವರ | ಶುಲ್ಕ(ಚಾಲ್ತಿಯಲ್ಲಿರುವ ಎಸ್. ಆರ್ ದರ ಪಟ್ಟಿಯನ್ವಯ) ರೂ ಲಕ್ಷ ಗಳಲ್ಲಿ |
|---|---|
| ಕ.ವಿ.ಪ್ರ.ನಿ.ನಿ ಯ 220/66 ಕೆ.ವಿ , ಉಪಕೇಂದ್ರದಲ್ಲಿ 66 ಕೆ.ವಿ. ಟರ್ಮಿನಲ್ ಬೇ | 18.00 |
| ಕ.ವಿ.ಪ್ರ.ನಿ.ನಿ ಯ 110/33/11 ಕೆ.ವಿ ಅಥವಾ 110/11 ಕೆ.ವಿ , ಉಪಕೇಂದ್ರದಲ್ಲಿ 110ಕೆ.ವಿ. ಟರ್ಮಿನಲ್ ಬೇ | 16.50 |
| ಕ.ವಿ.ಪ್ರ.ನಿ.ನಿ ಯ 220/110 ಕೆ.ವಿ , ಉಪಕೇಂದ್ರದಲ್ಲಿ110 ಕೆ.ವಿ. ಟರ್ಮಿನಲ್ ಬೇ | 21.00 |
| ಕ.ವಿ.ಪ್ರ.ನಿ.ನಿ ಯ 400/220 ಕೆ.ವಿ ಅಥವಾ 220/66 ಕೆ.ವಿ. ಅಥವಾ 220/110 ಕೆ.ವಿ, 220ಕೆ.ವಿ. ಟರ್ಮಿನಲ್ ಬೇ | 38.00 |
| ಮೇಲಿನ ಶುಲ್ಕಗಳು ಚಾಲ್ತಿಯಲ್ಲಿರುವ MWSR 2019 ರ ಪ್ರಕಾರ ದರಗಳನ್ನು ಆಧರಿಸಿವೆ | |

1. ಮೇಲಿನ ಶುಲ್ಕಗಳನ್ನು ದಿನಾಂಕ 23/05/2023 ರಿಂದ ಅನ್ವಯವಾಗುವಂತೆ ಕ.ವಿ.ಪ್ರ.ನಿ.ನಿ.ಯ ವಿದ್ಯುತ್ ಜಾಲದೊಂದಿಗೆ ಸಂಪರ್ಕ ಬಯಸುವ ಎಲ್ಲಾ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸಂಗ್ರಹಿಸತಕ್ಕದ್ದು.
2. ಮೇಲಿನ ಶುಲ್ಕಗಳನ್ನು ದಿನಾಂಕ 17/08/2012 ರ ನಿಗಮದ ಆದೇಶದನ್ವಯ ಕ.ವಿ.ಪ್ರ.ನಿ.ನಿ.ಯ ಉಪಕೇಂದ್ರಗಳಲ್ಲಿನ ಭೂಮಿಯನ್ನು ಬಳಸಲು ವಿಧಿಸಲಾಗುವ ಒಂದು ಬಾರಿ ಮರುಪಾವತಿಸಲಾಗದ ಶುಲ್ಕಗಳಿಗೆ ಹೆಚ್ಚುವರಿಯಾಗಿ ಸಂಗ್ರಹಿಸತಕ್ಕದ್ದು.
3. ಕಾಲಕಾಲಕ್ಕೆ ಸೂಚಿಸುವಂತೆ ಸ್ವೀಕಾರಾರ್ಹ ತೆರಿಗೆಗಳನ್ನು ಸಂಗ್ರಹಿಸತಕ್ಕದ್ದು.
4. ಸಂಬಂಧಿಸಿದ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ ರವರು ಕ.ವಿ.ಪ್ರ.ನಿ.ನಿ.ಯ ಉಪಕೇಂದ್ರಗಳಲ್ಲಿನ ಭೂಮಿಯನ್ನು ಬಳಸಲು ಸಂಗ್ರಹಿಸಲಾದ ಒಂದು ಬಾರಿ ಮರುಪಾವತಿಸಲಾಗದ ಶುಲ್ಕದ ಜೊತೆಗೆ ಕ.ವಿ.ಪ್ರ.ನಿ.ನಿ.ಯ ಸಾಮಾನ್ಯ ಮೂಲ ಸೌಕರ್ಯಗಳನ್ನು ಬಳಸಲು ಸಂಗ್ರಹಿಸಬೇಕಾದ ಒಂದು ಬಾರಿ ಮರುಪಾವತಿಸಲಾಗದ ಮೂಲ ಸೌಕರ್ಯ ಶುಲ್ಕಗಳನ್ನು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸಂಗ್ರಹಿಸಲು ಕ್ರಮ ವಹಿಸತಕ್ಕದ್ದು.
5. ಕ.ವಿ.ಪ್ರ.ನಿ.ನಿ.ಯ ವಿದ್ಯುತ್ ಜಾಲದೊಂದಿಗೆ ಸಂಪರ್ಕ ಬಯಸುವ ಎಲ್ಲಾ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಒಂದು ಬಾರಿ ಮರುಪಾವತಿಸಲಾಗದ ಮೂಲ ಸೌಕರ್ಯ ಶುಲ್ಕವನ್ನು ಪಾವತಿಸಿಕೊಳ್ಳಲು ಬೇಡಿಕೆಯನ್ನು ಸೂಚಿಸತಕ್ಕದ್ದು ಹಾಗೂ ಸೂಚಿಸಿದ ದಿನಾಂಕದಿಂದ 30 ದಿನಗಳ ಸಮಯದ ಮಿತಿಯೊಳಗೆ ಬೇಡಿಕೆಯ ಮೊತ್ತವನ್ನು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸಂಗ್ರಹಿಸತಕ್ಕದ್ದು.
6. ಬೇಡಿಕೆಯ ಮೊತ್ತವನ್ನು ಪಾವತಿಮಾಡಲು ನಿಗದಿ ಪಡಿಸಿದ 30 ದಿನಗಳ ನಂತರದಲ್ಲಿ ಮಾಡಲಾದ ಯಾವುದೇ ಪಾವತಿಯು ತಿಂಗಳಿಗೆ 1.25% ಅಥವಾ ಅದರ ಭಾಗವಾಗಿ ದಂಡಕ್ಕೆ ಅರ್ಹವಾಗಿರುತ್ತದೆ.
7. ಮೇಲಿನ ಶುಲ್ಕಗಳು ಡೀಮ್ಡ್ ಲೈಸೆನ್ಸೀಗಳಿಗೂ ಅನ್ವಯಿಸುತ್ತದೆ. (ESCOM ಗಳನ್ನು ಹೊರತುಪಡಿಸಿ)

11/08/23

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕ.ವಿ.ಪ್ರ.ನಿ.ನಿ.**

**ಪ್ರತಿಗಳು:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಹೆಸ್ಕಾಂ/ಸೆಸ್ಕ್/ಮೆಸ್ಕಾಂ/ಜೆಸ್ಕಾಂ
2. ನಿರ್ದೇಶಕರು(ತಾಂತ್ರಿಕ), ಬೆಸ್ಕಾಂ/ಹೆಸ್ಕಾಂ/ಸೆಸ್ಕ್/ಮೆಸ್ಕಾಂ/ಜೆಸ್ಕಾಂ
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ ಕ.ವಿ.ಪ್ರ.ನಿ.ನಿ.
4. ಎಲ್ಲಾ ಆರ್ಥಿಕ ಸಲಹೆಗಾರರು, ಕ.ವಿ.ಪ್ರ.ನಿ.ನಿ.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾಮಗಾರಿ/ನಿರ್ವಹಣೆ/ಕಾ & ನಿ ವೃತ್ತ, ಕ.ವಿ.ಪ್ರ.ನಿ.ನಿ.
6. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಕಾ & ನಿ/ಕಾಮಗಾರಿ/ಟಿಎಲ್ & ಎಸ್ಎಸ್ ವಿಭಾಗ, ಕ.ವಿ.ಪ್ರ.ನಿ.ನಿ.
7. ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ, ಕಾವೇರಿ ಭವನ, ಬೆಂಗಳೂರು.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ತಾಂತ್ರಿಕ) / (ಹಣಕಾಸು) / (ಆ&ಮಾ.ಸಂ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

ಅಧೀಕ್ಷಕ ಇಂಜಿನಿಯರ್(ವಿ), ಐಟಿ, ಕ.ವಿ.ಪ್ರ.ನಿ.ನಿ ರವರಿಗೆ ಆದೇಶದ ಪ್ರತಿಯನ್ನು ಕ.ವಿ.ಪ್ರ.ನಿ.ನಿ ಜಾಲತಾಣದಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡಲು.